ಯರಗಟ್ಟಿ : ಸಮೀಪದ ಮುನವಳ್ಳಿ ಪಟ್ಟಣದ ಮಲಪ್ರಭಾ ನದಿ ತೀರದಲ್ಲಿರುವ ಶ್ರೀ ಮಾರುತಿ ದೇವಸ್ಥಾನದಲ್ಲಿ ಹನುಮಾನ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ವಿಶೇಳ ಅಲಂಕಾರ ಪೂಜೆ , ಹನುಮಾನ ಚಾಲೀಸ ಪಠಣ, ಪ್ರಸಾದ ವಿತರಣೆ ಜರುಗಿತು. ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ, ಪಂಚಮುಖಿ ಹನುಮಾನ ದೇವಸ್ಥಾನ, ಗಾಂಧಿ ನಗರ ದೇವಸ್ಥಾನದಲ್ಲಿಯೂ ಕಾರ್ಯಕ್ರಮ ಜರುಗಿತು.

ಸೈನಿಕರ ಸೇವೆ ಅವಿಸ್ಮರಣೀಯವಾದ್ದು : ಜಗದೀಶ ಶೆಟ್ಟರ

ಯರಗಟ್ಟಿ: ಸೈನಿಕರ ಸೇವೆ ಅವಿಸ್ಮರಣೀಯವಾದ್ದು, ಅಂತಹ ರಕ್ಷಣಾ ವ್ಯವಸ್ಥೆಗೆ ಮತ್ತು ಸೈನಿಕರಿಗೆ ಬಲ ತುಂಬಿ ಸದೃಢ ಸೇನೆ ನರ್ಮಾಣ ಮಾಡಿರುವ ಶ್ರೇಯಸ್ಸು ಪ್ರಧಾನ ಮೋದಿ ಅವರಿಗೆ ಸಲ್ಲುತ್ತದೆ ಎಂದು ಬೆಳಗಾವಿ ಲೋಕಸಭಾ ಅಭ್ಯರ್ಥಿ ಜಗದೀಶ ಶೆಟ್ಟರ ಹೇಳಿದರು.

ಇಲ್ಲಿನ ರಾಷ್ಟ್ರೀಯ ಮಾಜಿ ಸೈನಿಕರ ಸಮನ್ವಯ ಸಮಿತಿಯಲ್ಲಿ ಸೋಮವಾರ ಹಮ್ಮಿಕೊಂಡಿರುವ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಇಂದು ಜಗತ್ತಿನ ಪ್ರೀತಿ ವಿಶ್ವಾಸ ಗಳಿಸಿರುವ ಪ್ರಧಾನ ಮೋದಿ ಅವರ ಆರ್ಥಿಕ ನೀತಿಯು ಅತ್ಯಂತ ವ್ಯವಸ್ಥಿತವಾಗಿದ್ದು, ಬರುವ ಕೆಲ ವರ್ಷಗಳಲ್ಲಿ ನಮ್ಮ ದೇಶವು ಮೋದಲ ಸ್ಥಾನದಲ್ಲಿ ನಲ್ಲುವುದಲ್ಲಿ ಯಾವುದೇ ಅನುಮಾನವಿಲ್ಲ. ದೇಶಕ್ಕೆ ಒಂದೇ ಮಾದರಿಯ ಕಾನೂನು ಜಾರಿ ಮಾಡಿ ಸರ್ವರಿಗೂ ಸಮಾನ ನ್ಯಾಯ ಒದಗಿಸುವುದು ಮೋದಿಯವರ ಕನಸು ಎಂದರು. ಬ್ರಿಗೇಡಿ ಡಿ.ಎಂ. ಪೂರ್ವಿಮಠ ಮಾತನಾಡಿ, ನಮ್ಮ ರಾಜ್ಯದಲ್ಲಿ ಮೊದಲು ಅತೀ ಹೇಚ್ಚು ಸೈನಿಕರನ್ನು ಹೊಂದಿರುವ ಪ್ರದೇಶ ಕೂರ್ಗ ಆಗಿತ್ತು. ಆದರೆ ಈಗ ಬೆಳಗಾವಿ ಜಿಲ್ಲೆಯಲ್ಲಿ ಲಕ್ಷಾಂತರ ಸೈನಿಕರನ್ನು ಹೊಂದಿದೆ. ಸೇನಾ ವ್ಯವಸ್ಥೆಯಲ್ಲಿ ಮೋದಿ ಅವರು ಸಾಕಳ್ಳು ಬದಲಾವಣೆ ತಂದಿರುವುದು ನಮಗೆಲ್ಲ ಬಹಳಳ್ಳು ಅನೂಕುಲತೆ ಆಗಿದೆ ಎಂದರು.

ಎಂಎಲ್‌ಸಿ ಹನಮಂತ ನಿರಾಣಿ, ಜಿಪಂ ಮಾಜಿ ಸದಸ್ಯರಾದ ಅಜಿತಕುಮಾರ ದೇಸಾಯಿ, ಎಸ್.ಎ. ಕೊಟ್ಟರಶೆಟ್ಟಿ, ನವೃತ್ತ ಐಎಎಸ್ ಅಧಿಕಾರಿ ವಿಜಯಕುಮಾರ ತೊರಗಲ್, ಧನಲಕ್ಷ್ಮಿ ಶುಗರ್ಸ ಅಧ್ಯಕ್ಷ ಮಲ್ಲಣ್ಣ ಯಾದವಾಡ, ವಿಠಲ ಬಂಟನೂರ, ಎಂ.ಎಸ್. ಅಳಗೋಡಿ, ಕುಮಾರ ಹಿರೇಮಠ, ಸದಾನಂದ ಹಣಬರ, ರಾಜು ಕತ್ತಿಶೆಟ್ಟಿ, ಶಿವಾನಂದ ಪಟ್ಟಣಶೆಟ್ಟಿ ಇತರರು ಇದ್ದರು.

ನೇಹಾ ಹಿರೇಮಠ ಭಾವಚಿತ್ರಕ್ಕೆ ದೀಪ ಬೆಳಗಿಸಿ ಶ್ರದ್ಧಾಂಜಲಿ

ಯರಗಟ್ಟಿ: ಹುಬ್ಬಳ್ಳಿಯಲ್ಲಿ ನಡೆದ ವಿದ್ಯಾರ್ಥಿನಿ ನೇಹಾ ಹಿರೇಮಠ ಭೀಕರ ಹತ್ಯೆಯನ್ನು ಖಂಡಿಸಿ ರವಿವಾರ ಸಂಜೆ ಇಲ್ಲಿನ ಸಂಗೋಳ್ಳಿ ರಾಯಣ್ಣ ವೃತ್ತದಲ್ಲಿ ಬೃಹತ್ತ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ವಿಧಾನ ಪರೀಷತ್ ಸದಸ್ಯ ಪ್ರದೀಪ ಶೆಟ್ಟರ ಮಾತನಾಡಿ, ಬಿವಿಬಿ ಕಾಲೇಜಿನ ಒಳಗಡೆಗೆ ಅಕ್ರಮವಾಗಿ ನುಸುಳಿ ಈ ರೀತಿ ಹಾಡು ಹಗಲೇ ಜನರು ನೋಡ ನೋಡುತ್ತಿದ್ದಂತೆ ಬರರ್ಬವಾಗಿ ಕೊಲೆ ಮಾಡುತ್ತಾನೆ ಎಂದರೆ ಕಾನೂನು ಮತ್ತು ಪೊಲೀಸ್ ವ್ಯವಸ್ಥೆಯ ಭಯ ಇಲ್ಲದಂತಾಗಿ, ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ ಎಂಬುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಕೊಲೆ ಮಾಡಿರುವ ಬಗ್ಗೆ ಸಿಸಿ ಟಿವಿ ವಿಡಿಯೋಗಳು ಸಾಕ್ಷಿ ಇದ್ದು, ನರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲು ಸರ್ಕಾರ ಹಿಂದೆಟು ಹಾಕಿದರೆ ಜನ ಇವರನ್ನು ಸಹಿಸುವುದಿಲ್ಲ ಎಂದರು.

ಜಿಲ್ಲಾ ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಡಾ. ನಯನಾ ಭಸ್ಮೆ ಮಾತನಾಡಿ, ರಾಜ್ಯ ಮಹಿಳೆಯರ ಸುರಕ್ಷತೆಯ ಸ್ಥಿತಿ ಸಂಪೂರ್ಣ ಹದಗೆಟ್ಟಿದೆ. ಖದಿಮರನ್ನು, ದೇಶ ದ್ರೋಹಿಗಳನ್ನು, ಕೊಲೆ ಸುಲುಗೆ ಮಾಡುವ ನೀಚರನ್ನು ರಕ್ಷಸುವ ಸಿದ್ದರಾಮಯ್ಯನಗೆ ಇನ್ನು ಉಳಿಗಾಲವಿಲ್ಲ. ಹೆಣ್ಣು ಶಾಪ ಅವನಗೆ ತಟ್ಟುವುದು ಗ್ಯಾರಂಟಿ ಎಂದರು.

ಈ ವೇಳೆ ತಹಸೀಲ್ದಾರ ಎಸ್. ಎಸ್. ಇಂಗಳೆ, ಬಾಜಪ ತಾಲೂಕಾ ಅಧ್ಯಕ್ಷ ಈರಣ್ಣ ಚಂದರಗಿ, ವೆಂಕಟೇಶ ದೇವರಡ್ಡಿ, ವಿಶಾಲಗೌಡ ಪಾಟೀಲ, ಕುಮಾರ ಹಿರೇಮಠ, ಕಿಟ್ಟು ತೊರಗಲ್ಲ, ಆನಂದ ಬಾಗೋಡಿ, ಪ್ರವೀಣ ಬೆಣ್ಣಿ, ಮಹಾಂತೇಶ ಜಕಾತಿ, ಮಹಾಂತೇಶ ಗೋಡಿ, ರಾಜೇಂದ್ರ ವಾಲಿ, ಕಿರಣ ಹುಣಶಾಳ, ಈರಣ್ಣ ಮಠಮತಿ, ಕುಮಾರ ಜಕಾತಿ, ವಿನಾಯಕ ಇಟ್ನಾಳ, ಶಿವಾನಂದ ಪಟ್ಟಣಶೆಟ್ಟಿ, ಚೇತನ ಜಕಾತಿ, ಈರಣ್ಣಾ ಪೂಜೇರ, ಅನೀಲ ದೇವರಡ್ಡಿ, ರಮೇಶ ಮುರಗೋಡ, ಮಹಾದೇವ ಯಡ್ರಾವಿ, ಮಂಜು ಕೊಪ್ಪದ, ಗೋವಿಂದ ಪುಜೇರ, ಶಿವರಾಜ ರುದ್ರಪ್ಪನವರ, ಈರಣ್ಣಾ ಹುಲ್ಲೂರ, ಸಮೇದ ಕಟ್ಟಿಮನ, ಇತರರು ಇದ್ದರು.

ಇಂದು ವಿಶ್ವ ಮಲೇರಿಯಾ ದಿನಾಚರಣೆ ಅಂಗವಾಗಿ ಜಾಥಾ

ಬಳ್ಳಾರಿ,ಏ :ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಯಂ ತ್ರಣಾ ಧಿಕಾರಿಗಳ ಕಚೇರಿ ವತಿಯಿಂದ 'ವಿಶ್ವ ಮಲೇ ರಿಯಾ ದಿನಾಚರಣೆ' ಅಂಗವಾಗಿ 'ಹೆಚ್ಚು ಸಮಾನತೆಯ ಜಗತ್ತಿಗೆ ಮಲೇರಿಯಾ ವಿರುದ್ಧದ ಹೋ ರಾಟವನ್ನು ತೀವ್ರಗೊ ಳಿಸೋಣ' ಎಂಬ ಘೋಷ ವಾಕ್ಯದೊಂದಿಗೆ ಏ.25 ರಂದು ಬೆಳಿಗ್ಗೆ 9:30 ಗಂಟೆಗೆ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಿಂದ ಟ್ಯಾಬ್ಲೋ ಜಾಥಾ ಕಾರ್ಯ ಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ರೋಗ'ವಾಹಕ ಆಶ್ರಿತ ರೋ ಗಗಳ ನಯಂ ತ್ರಣಾಧಿಕಾರಿ ಡಾ. ಆರ್ .ಅಬ್ದುಲ್ಲಾ ಅವರು ತಿಳಿಸಿದ್ದಾರೆ.

ಚುನಾವಣಾ ವೀಕ್ಷಕರ ಭೇಟಿ, ಅಧಿಕಾರಿಗಳ ಜತೆ ಸಭೆ

ಗದಗ ಏಪ್ರಿಲ್ : ಲೋಕಸಭಾ ಸಾರ್ವತ್ರಿಕ ಚುನಾವಣಾ ಹಿನ್ನಲೆ ಬಾಗಲಕೋಟೆ ಲೋಕಸಭಾ ಕ್ಷೇತ್ರದ ನರಗುಂದ ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಸಂಬಂಧ' ಚುನಾವಣಾ ಸಾಮಾನ್ಯ ವೀಕ್ಷಕರಾದ ಇ. ಶರವಣ ವೆಲ್‌ರಾಜ್ ಐಎಎಸ್, ಪೊ?ಲಿಸ್ ವೀಕ್ಷಕರಾದ ಎಂ.ಆರ್ಶಿ ಐಪಿಎಸ್, ವೆಚ್ಚ ವೀಕ್ಷಕರಾದ ಇಪ್ತಿಕಾರ್ ಅಹಮ್ಮದ್ ಐಆರೆಸ್ ಅವರು ಲೋಕಸಭಾ ಚುನಾವಣಾ ಸಿದ್ಧತೆ ಸಂಬಂಧಿಸಿದಂತೆ ಮಂಗಳವಾರ ಮಾಹಿತಿ ಪಡೆದರು.

ನಗರದ ಜಿಲ್ಲಾಧಿಕಾರಿ ಅವರ ಕಚೇರಿಯಲ್ಲಿ ಸ್ಥಾಪಿಸಲಾಗಿರುವ ನಯಂತ್ರಣ ಕೊಠಡಿ ವೀಕ್ಷಿಸಿದ ನಂತರ ನಡೆದ ಸಭೆಯಲ್ಲಿ ಮಾತನಾಡಿದ ಸಾಮಾನ್ಯ ವೀಕ್ಷಕರಾದ ಶರವಣ ವೆಲ್‌ರಾಜ್ ಅವರು ನರುಗುಂದ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತದಾರರ ವಿವರ, ಯುವ ಮತದಾರರ ಸಂಖ್ಯೆ, ಮತಗಟ್ಟೆಗಳ ವಿವರ, ಅಂಚೆ ಮತಪತ್ರ, ವಿದ್ಯುನ್ಮಾನ ಮತಯಂತ್ರ, ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ಸೇರಿದಂತೆ ಹಲವು ಮಾಹಿತಿ ಪಡೆದರು.

ಪೊಲೀಸ್ ವೀಕ್ಷಕರಾದ ಎಂ.ಆರ್ಸಿ ಅವರು ಲೋಕಸಭಾ ಚುನಾವಣೆಯನ್ನು ನಷ್ಪಕ್ಷಪಾತ ಮತ್ತು ಶಾಂತಿಯುತ ನಡೆಸಬೇಕು ಎಂದು ಹೇಳಿದರು.

ಮತಗಟ್ಟೆ ಕೇಂದ್ರಗಳಲ್ಲಿ ವಿದ್ಯುತ್, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಸಬೇಕೆಂದು ಸೂಚಿಸಿದರು. ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರು ನರುಗುಂದ ವಿಧಾನಸಭಾ ಕ್ಷೇತ್ರದಲ್ಲಿನ ಮತದಾರರ ಸಂಖ್ಯೆ, ಯುವದಾರರ ಸಂಖ್ಯೆ, ಮತಗಟ್ಟೆ ವಿವರ, ವಿದ್ಯುನ್ಮಾನ ಮತಯಂತ್ರ, ಭದ್ರತಾ ಕೊಠಡಿ, ಮತಗಟ್ಟೆ ಅಧಿಕಾರಿಗಳ ನಯೋಜನೆ, ಮೈಕ್ರೋ ವೀಕ್ಷಕರ ನೇಮಕ, ಅಂಚೆ ಮತದಾನ ಸೇರಿದಂತೆ ಲೋಕಸಭಾ ಚುನಾವಣೆ ಬಗ್ಗೆ ಮಾಹಿತಿ ನೀಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಅವರು ಚೆಕ್‌ಪೊಸ್ಟ್‌ಗಳ ಸಂಖ್ಯೆ, ಪೊಲೀಸರ ನಯೋಜನೆ ಸೇರಿದಂತೆ ಚುನಾವಣೆ ಸಂಬಂಧ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಜಿ.ಪಂ.ಸಿಇಒ ಎಸ್.ಭರತ್ ಅವರು ಮಾತನಾಡಿ ಜಿಲ್ಲೆಯಲ್ಲಿ ಶೇಕಡವಾರು ಮತದಾನ ಹೆಚ್ಚಳಕ್ಕೆ ಸಂಬಂಧಿಸಿದಂತೆ ವಿವಿಧ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜಿ.ಪಂ.ಮುಖ್ಯ ಲೆಕ್ಕಾಧಿಕಾರಿ ಅಮಿನಸಾಬ್ ಅತ್ತಾರ, ನಯಂತ್ರಣ ಕೊಠಡಿಯ ನೋಡಲ್ ಅಧಿಕಾರಿ ಸೈಯದ್ ಸೇರಿದಂತೆ ವಿವಿಧ ವಿಭಾಗದ ನೋಡಲ್ ಅಧಿಕಾರಿಗಳು ಇದ್ದರು.

ಗದಗ : ಜಿಪಂ ಮುಖ್ಯ ಕಾರ್ಯನರ್ವಾಹಕ ಅಧಿಕಾರಿಗಳಾದ ಭರತ್, ಎಸ್ ಅವರು ಮುಂಡರಗಿ ತಾಲೂಕಿನ ವಿರುಪಾಪೂರ ತಾಂಡೆ, ಮುಂಡವಾಡ, ಬಿದರಹಳ್ಳಿ, ಜಾಲವಾಡಗಿ ಗ್ರಾಮಗಳಲ್ಲಿ ನರೇಗಾ ಯೋಜನೆಯಡಿ ತೋಟಗಾರಿಕೆ ಇಲಾಖೆಯಿಂದ ಸಹಾಯಧನ ಪಡೆದು ಬಾಳೆ ಬೆಳೆ ಬೆಳೆದ ಆಯಾ ಗ್ರಾಮಗಳ ರೈತರ ಜಮೀನಗೆ ಭೇಟಿ ನೀಡಿ, ರೈತರೊಂದಿಗೆ ಸಮಾಲೋಚನೆ ನಡೆಸಿದರು. ಈ ವೇಳೆ ತಾಪಂ ಕಾರ್ಯನರ್ವಾಹಕ ಅಧಿಕಾರಿ ವಿಶ್ವನಾಥ ಹೊಸಮನಿ, ತೋಟಗಾರಿಕೆ ಇಲಾಖೆ ಸಹಾಯಕ ನರ್ದೇಶಕ ಎಂ. ಎಂ. ತಾಂಬೋಟಿ, ಪಂಚಾಯತ ರಾಜ್ ಸಹಾಯಕ ನರ್ದೇಶಕ ಪ್ರವೀಣ ಗೋಣೆಮ್ಮನವರ, ಎಡಿಪಿಸಿ ಕಿರಣಕುಮಾರ್ ಹಾಗೂ ತಾಪಂ ಸಿಬ್ಬಂದಿ ಹಾಜರಿದ್ದರು.

ಕರಾಮುವಿ: ಕೆಎಎಸ್, ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಬಳ್ಳಾರಿ,ಏ.: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಲೋಕಸೇವಾ ಆಯೋಗದವರು ನಡೆಸಲಿರುವ ಕೆಎಎಸ್ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕರಾಮುವಿ ಕೇಂದ್ರ ಕಚೇರಿಯಲ್ಲಿ ನೀಡಲಾಗುವುದು ಎಂದು ನರ್ಧರಿಸಲಾಗಿದೆ ಎಂದು ಕರಾಮುವಿ ಕುಲಸಚಿವ ಪೊ?ರ.ಕೆ.ಬಿ.ಪ್ರವೀಣ ಅವರು ತಿಳಿಸಿದ್ದಾರೆ. ಆಸಕ್ತರು ಏ.30 ರೊಳಗಾಗಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು 0821-2515944 ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದೆಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಳ್ಳೂರ : ಗ್ರಾಮದಲ್ಲಿ ಹನುಮ ಜಯಂತಿ ಆಚರಣೆ ಅತೀ ವಿಜೃಂಭಣೆಯಿಂದ ನಡೆಯಿತು.ಪ್ರಾರಂಭದಲ್ಲಿ ಜೈ ಹನುಮಾನ್ ದೇವರ ವಿಶೇಷ ಪೂಜೆ ಅಭಿಷೇಕ ನೆರವೇರಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಜೈ ಹನುಮಾನ್ ಭಾವಚಿತ್ರ ಹಾಗೂ ಪಲ್ಲಕ್ಕಿ ಉತ್ಸವ ಮೆರವಣಿಗೆ ನಡೆಯಿತು. ತೊಟ್ಟಿಲಲ್ಲಿ ಶ್ರೀ ರಾಮ್ ನನ್ನು ಹಾಕಿ ಶ್ರೀ ರಾಮ್ ಜೈ ಹನುಮಾನ್ ಎಂದು ನಾಮಕರಣ ಮಾಡಿ ತೊಟ್ಟಿಲೋತ್ಸವ ಕಾರ್ಯಕ್ರಮ ನಡೆಯಿತು.ಸರ್ವರಿಗೂ ಮಹಾಪ್ರಸಾದ ವ್ಯವಸ್ಥೆ ನಡೆಯಿತು. ಇದೆ ಸಂಧರ್ಭದಲ್ಲಿ ಡಾ ರಮೇಶ ಸಂತಿ. ಹಾಗೂ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಮುರಿಗೆಪ್ಪ ಮಾಲಗಾರ ಅವರಿಗೆ ನವೃತ್ತ ಶಿಕ್ಷಕ ಬಸವರಾಜ ಕೌಜಲಗಿ ಅವರು ಸನ್ಮಾನ ಮಾಡಿ ಸವಿ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ಬೆಳಗಾವಿಯಲ್ಲಿ ಬಿಜೆಪಿ ಕಾರ್ಯಕರ್ತರ ಬೃಹತ್ ಸಮಾವೇಶ

ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಜಗದೀಶ್ ಶೆಟ್ಟರ್

ಬೆಳಗಾವಿ: ಹುಬ್ಬಳ್ಳಿಯಲ್ಲಿ ನೇಹಾ ಹತ್ಯೆ ಆಗಿದ್ದು, ಲವ್ ಜಿಹಾದ್ ಮಾಡಿ ಬ್ರೇನ್ ವಾಷ್ ಮಾಡಲಾಗಿದೆ. ಇದನ್ನು ಸಿದ್ದರಾಮಯ್ಯ ಖಂಡಿಸುವ ಕೆಲಸ ಮಾಡುತ್ತಿಲ್ಲ. ಸಿದ್ದರಾಮಯ್ಯ ವಯಕ್ತಿಕ ಕಾರಣಕ್ಕೆ ಮರ್ಡರ್ ಆಗಿದೆ ಎಂದು ಹೇಳಿದ್ದಾರೆ. ಹಿಂದೂ ಹುಡುಗ ಮುಸ್ಲಿಂ ಹುಡುಗಿಯನ್ನು ಮರ್ಡರ್ ಮಾಡಿದ್ದರೆ ಅವರ ಮನೆಗೆ ಓಡಿ ಹೋಗ್ತಿದ್ದರು ಎಂದು ಕಾಂಗ್ರೆಸ್ ಸರ್ಕಾರ ವಿರುದ್ಧ ಜಗದೀಶ್ ಶೆಟ್ಟರ್ ಅವರು ವಾಗ್ದಾಳಿ ನಡೆಸಿದರು.

ಇಂದು ಬೆಳಗಾವಿ ಉತ್ತರ ಮತ ಕ್ಷೇತ್ರದ ಬೂತ್ ಮಟ್ಟದ ಕಾರ್ಯಕರ್ತರ ಸಮಾವೇಶವನ್ನು ಇಂದು ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮೊದಲು ನೇಹಾ ಹಿರೇಮಠ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬಳಿಕ ದೀಪ ಪ್ರಜ್ವಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಸಮಾವೇಶ ಉದ್ದೇಶಿಸಿ ಮಾತನಾಡಿದ ಬಿಜೆಪಿ ಅಭ್ಯರ್ಥಿ ಜಗದೀಶ್ ಶೆಟ್ಟರ್ ಅವರು, ಒಬ್ಬಂಟಿ ಮಹಿಳೆ ನುಡುರಾತ್ರಿಯಲ್ಲಿ ಓಡಾಡಿದರೆ ಸ್ವಾತಂತ್ರ ಅಂತಿದ್ರು, ಈಗ ಹಾಡು ಹಗಲೇ ಮಹಿಳೆಯರ ಕೊಲೆ ಅತ್ಯಾಚಾರಗಳು ನಡೆಯುತ್ತಿವೆ. ಅಲ್ಪಸಂಖ್ಯಾರ ತುಷ್ಟಿಕರಣಕ್ಕಾಗಿ ನೇಹಾ ಅವರ ಮನೆಗೆ ಸಿಎಂ ಡಿಸಿಎಂ ಹೋಗಿಲ್ಲ. ಹೆಚ್ ಕೆ ಪಾಟೀಲರನ್ನು ಮನೆಗೆ ಕಳಿಸಿ ಫೋನ್ ಮಾಡಿಸಿ ನನ್ನ ತಪ್ಪಾಗಿದೆ ಅಂತಾರೆ. ನಜವಾಗಿಯೂ ನಮ್ಮ ತಪ್ಪಾಗಿದ್ದರೆ ಅವರ ಮನೆಗೆ ಹೋಗಿ ಕ್ಷಮೆ ಕೇಳಿ ಒತ್ತಾಯಿಸಿದರು.

ಮೋದಿಯವರು ಮೂರನೇ ಬಾರಿ ಪ್ರಧಾನ ಆಗಬೇಕು ಎನ್ನುವುದು 140 ಕೋಟಿ ಜನರ ಕನಸು. ಭಾರತಕ್ಕೆ ಅತ್ಯಂತ ಗೌರವ ತರುವ ಕೆಲಸ ಮಾಡಿದ್ದು ನರೇಂದ್ರ ಮೋದಿ. ಮೋದಿ ಪ್ರಧಾನಯಾಗುವ ಮೊದಲು ಭಾರತ ಅರ್ಥಿಕತೆ 15 ನೇ ಸ್ಥಾನದಲ್ಲಿತ್ತು, ಮೋದಿ ಪ್ರಧಾನಯಾಗಿ 10 ವರ್ಷಕ್ಕೆ 5ನೇ ಸ್ಥಾನಕ್ಕೆ ಏರಿದೆ. 15 ವರ್ಷಗಲ್ಲಿ ಜಗತ್ತಿನ ಸೂಪರ್ ಪವರ್ ರಾಷ್ಟ್ರವಾಗಿ ಭಾರತ ನಲ್ಲುತ್ತೆ ಎಂದು ತಿಳಿಸಿದರು.

ಮಹಿಳಾ ಮೀಸಲಾತಿ ನಗರಸಭೆ ಪುರಸಭೆ ತಾಲೂಕು ಪಂಚಾಯ್ತಿಯಲ್ಲಿ, ಅಸೆಂಬ್ಲಿ, ಎಂಪಿ, ಎಂಎಲ್ ಎಗೆ ಮೀಸಲಾತಿ ಇರಲಿಲ್ಲ. ಅದಕ್ಕೆ 33% ಪರ್ಸಂಟ್ ಮೀಸಲಾತಿ ನೀಡಲಾಗಿದೆ. ಬಸವಣ್ಣನವರ ಸಮಾನತೆಯ ರೀತಿಯಲ್ಲಿ ಎಲ್ಲರಿಗೂ ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

ನಾಲ್ಕು ಬಾರಿ ಸುರೇಶ್ ಅಂಗಡಿಗೆ ಆಶೀರ್ವಾದ ಮಾಡಿದ್ದೀರಿ. ಮಂಗಳಾ

ಅಂಗಡಿ ಸಹ ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಮೋದಿ ಪ್ರತಿನಧಿಯಾಗಿ ನಾನು ಇಲ್ಲಿ ಸ್ಪರ್ಧೆ ಮಾಡ್ತಿದ್ದಿನ, ನನಗೆ ಆಶೀರ್ವಾದ ಮಾಡುವ ಮೂಲಕ ನರೇಂದ್ರ ಮೋದಿಯವರನ್ನು ಮೂರನೇ ಬಾರಿ ಪ್ರಧಾನ ಮಾಡಿ ಎಂದು ಜಗದೀಶ ಶೆಟ್ಟರ್ ಅವರು ಹೇಳಿದರು.

ರಾಮಮಂದಿರ ಕಟ್ಟಿದ್ದು ಸುವರ್ಣ ಅಕ್ಷರದಲ್ಲಿ ಬರೆಯಬೇಕು: ಅನಲ ಬೆನಕೆ

ಪ್ರಾಸ್ತಾವಿಕವಾಗಿ ಮಾತನಾಡಿದ ಬಿಜೆಪಿ ರಾಜ್ಯ ಉಪಾದ್ಯಕ್ಷ ಅನಲ ಬೆನಕೆ ಅವರು, ನರೇಂದ್ರ ಮೋದಿಯವರು ಮೂರನೆ ಸಲ ಪ್ರಧಾನ ಆಗಬೇಕು. ಕಳೆದ 10 ವರ್ಷದಿಂದ ದೇಶದಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ದೇಶ ಮುಂದಿನ ದಿನಗಳಲ್ಲಿ ವಿಶ್ವಗುರು ಆಗಲಿ. ಏ 28 ರಂದು ಮೋದಿಯವರು ಬೆಳಗಾವಿಗೆ ಬರಲಿದ್ದಾರೆ. ಮೋದಿಯವರನ್ನು ಅದ್ಧೂರಿಯಾಗಿ ಸ್ವಾಗತ ಮಾಡಬೇಕು ಎಂದರು.

ದೇಶದಲ್ಲಿ 500 ವರ್ಷದಿಂದ ರಾಮಮಂದಿರ ಆಗಿರಲಿಲ್ಲ ಆದರೆ ಮೋದಿಯವರು ಮಂದಿರ ಕಟ್ಟಿಸಿದ್ದು, ಇತಿಹಾಸದಲ್ಲಿ ಸುವರ್ಣ ಅಕ್ಷರದಲ್ಲಿ ಬರೆಯಬೇಕುಮ ಕಳೆದ 10 ವರ್ಷದ ಹಿಂದೆ ಸಾಕಷ್ಟು ಭ್ರಷ್ಟಾಚಾರ, ಹಗರಣಗಳು ಹೊರಗೆ ಬರುತಿತ್ತು, ಆದರೆ ಮೋದಿ ಸರ್ಕಾರ ಬಂದ ಮೇಲೆ ಯಾವುದೇ ಭ್ರಷ್ಟಾಚಾರ ಆಗಿರಲಿಲ್ಲ. ಮೋದಿಯವರು ಆರ್ಟಿಕಲ್ 370 ತಗೆದಿದ್ದರಿ